**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 308/2016** **ದಿನಾಂಕ:09.06.2026**

**ಸಿ ಡಬ್ಲ್ಯೂ : 6**

**ಪಿ ಡಬ್ಲ್ಯೂ : 6**

---------------------------------------------------------------------------------

**ಪಾಟೀ ಸವಾಲು: ಆರೋಪಿ ಪರ ಶ್ರೀ . ಎ ಜಿ ಜಿ ವಕೀಲರಿಂದ:**

ಸಾಕ್ಷಿಗೆ ಮು ಮಾ 1 ನ್ನು ತೋರಿಸಿ ಸದರಿ ಬಾಟಲನ ಮೇಲೆ ಒಂದು ಹಳೆ ಕಾಗದ ಮೊದಲು ಇತ್ತು ಅದರ ಮೇಲೆ ಇನ್ನೊಂದು ಹೊಸ ಕಾಗದ ಇರುವುದು ಕಂಡುಬರುತ್ತಿದ್ದು ಮತ್ತು ನಂತರ ಅದರ ಮೇಲೆ ಪ್ಲಾಸ್ಟಿಕ ಟೇಪನ್ನು ಸುಮಾರು ಐದಾರು ಸುತ್ತು ಸುತ್ತಲಾಗಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ಎರಡು ಕಾಗದ ಇರುವುದು ಕಾಣುತ್ತಿಲ್ಲ ಅಲ್ಲಿ ಕಾಣುತ್ತಿರುವುದು ಮೂಲ ಕಾಗದ ಎಂದು ಹೇಳುತ್ತಾರೆ. ಸದರಿ ಮು ಮಾ ಖಾಲಿ ಬಾಟಲ ಆಗಿದ್ದು ಯಾವುದೇ ದ್ರವ ಕಾಣುತ್ತಿಲ್ಲ ಎಂದರೆ ಸರಿ . ಈ ಹಂತದಲ್ಲಿ ಆರೋಪಿ ಪರ ವಕೀಲರು ಮು ಮಾ ಈ ಮೊದಲಿನ ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಯ ಸವಯದಲ್ಲಿ ಬೇರೆ ಬೇರೆ ತರಹನಾಗಿದ್ದು ಅದಕ್ಕೆ ಸಂಬಂಧಪಟ್ಟಂತೆ ನಾನು ಕೆಲವೊಂದು ಪ್ರಶ್ನೆಗಳನ್ನು ಕೇಳಿರುತ್ತೇನೆ. ನಂತರದ ಸಮಯದಲ್ಲಿ ಸದರಿ ಸಂಗತಿಗಳನ್ನು ಮಾರ್ಪಾಡು ಮಾಡಲಾಗಿರುತ್ತದೆ ಅಂತಾ ಆರೋಪಿಸಿ ಆರೋಪಿ ಪರ ವಕೀಲರು ಸದರಿ ಮು ಮಾ ನ ಮೇಲೆ ಅಂಟಿಸಿದ ಅಂಟಿನ ಪ್ಲಾಸ್ಟಿಕ ಟೇಪನ್ನು ತೆರೆಯಲು ಅವಕಾಶ ನೀಡುವಂತೆ ಕೋರಿಕೊಂಡಿರುತ್ತಾರೆ. ಆದ್ದರಿಂದ ಸದರಿ ಅಂಟಿಸಿದ ಪ್ಲಾಸ್ಟಿಕ ಟೇಪನ್ನು ತೆರೆಯಲು ಅನುಮತಿ ನೀಡಲಾಯಿತು. ಸದರಿ ಬಾಟಲ ಪಾರದರ್ಶಕವಾಗಿದ್ದು ಸದರಿ ಬಾಟಲ ಮೇರೆ ಅಂಟಿಸಿದ ಕಾಗದವನ್ನು ಹಿಂದಿನಿಂದ ನೋಡಲಾಗಿ ಬೇರೆ ಬೇರೆ ಕಾಗದದ ಮೇಲೆ ಬೇರೆ ಬೇರೆ ಸೀಲುಗಳು ಇರುವುದು ಕಾಣುತ್ತದೆ ಎಂದರೆ ಸರಿಯಲ್ಲ. ಆರೋಪಿತನು 2010 ರಿಂದ ನಮ್ಮ ಸಿಬ್ಬಂದಿಗೆ ಪರಿಚಯಸ್ಥನಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ಸಂಬರಗಿ ಗ್ರಾಮದಲ್ಲಿ ಶೇತ್ಕಿ ಯನ್ನು ಮಾಡಿಕೊಂಡು ಜೀವನ ಮಾಡುತ್ತಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ತಾನು ಯಾವುದೇ ಅಕ್ರಮ ಮದ್ಯ ಮಾರಾಟ ಚಟುವಟಿಕೆಯಲ್ಲಿ ಪಾಲ್ಗೊಂಡಿಲ್ಲ ಆದರೂ ಸಹಿತ ಕೇವಲ ಠಾಣೆ ಅಂಕೆ ಸಂಖ್ಯೆಗೊಸ್ಕರ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಈ

ಪ್ರಕರಣದಲ್ಲಿನ ಪಂಚರಾದ ಚಾಸಾ 1 ಮತ್ತು 2 ರವರು ನಮ್ಮ ಠಾಣೆಯ ಪ್ರಕರಣದ ಖಾಯಂ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ. ಪಂಚರನ್ನು ಹೊರತುಪಡಿಸಿ ಈ ಪ್ರಕರಣದಲ್ಲಿನ ಎಲ್ಲಾ ಸಾಕ್ಷಿದಾರರು ನಮ್ಮ ಇಲಾಖಾ ಸಿಬ್ಬಂದಿಗಳು ಎಂದರೆ ಸರಿ. ಘಟನಾ ಸ್ಥಳವು ಬಸ್ಸು ನಿಲ್ದಾಣ ಇರುವುದರಿಂದ ಘಟನೆ ನಡೆದಿದೆ ಎಂದು ಹೇಳುವ ಸಮಯದಲ್ಲಿ ಸಾಕಷ್ಟು ಜನದಟ್ಟನೆಯಿಂದ ಕೂಡಿದ ಪ್ರದೇಶವಾಗಿರುತ್ತದೆ ಎಂದರೆ ಸಾಕ್ಷಿ ನಾನು ಘಟನಾ ಸಮಯದಲ್ಲಿ ಅಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಘಟನಾ ಸ್ಥಳದಲ್ಲಿ ಸಾಕಷ್ಟು ಅಂಗಡಿ ಮುಂಗಟ್ಟುಗಳು ಇರುವುದರಿಂದ ಸಾಕಷ್ಟು ಜನ ಓಡಾಡುತ್ತಾರೆ ಎಂದಂರೆ ಸರಿ . ನಾವು ಸದರಿ ಘಟನಾ ಸ್ಥಳದಲ್ಲಿನ ಅಂಗಡಿ ಮುಂಗಟ್ಟುಗಳಲ್ಲಿ ಇದ್ದವರಿಗೆ ಮತ್ತು ಘಟನೆಯನ್ನು ನೋಡಿದವರಿಗೆ ಸಾಕ್ಷಿ ನುಡಿಯಲು ಕೇಳಿಕೊಂಡಿರುತ್ತೇವೆ ಆದರೆ ಸದರಿಯವರು ಒಪ್ಪಿ ರುವುದಿಲ್ಲ. ಸದರಿ ವ್ಯಕ್ತಿಗಳಿಗೆ ಸಾಕ್ಷಿ ನುಡಿಯಲು ನಾನು ಯಾವುದೇ ನೋಟಿಸ ನೀಡಿರುವುದಿಲ್ಲ ಮತ್ತು ಸಾಕ್ಷಿ ನುಡಿಯಲು ಒಪ್ಪದವರ ವಿರುದ್ದ ಯಾವುದೇ ಪ್ರಕರಣವನ್ನು ದಾಖಲು ಮಾಡಿಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ರೀತಿ ಕೂಲಂಕುಷವಾಗಿ ಪ್ರಕರಣದ ತನಿಖೆ ಮಾಡಿಲ್ಲ ಮತ್ತು ಠಾಣೆಯಲ್ಲೆ ಕುಳಿತು ಎಲ್ಲ ದಾಖಲೆಗಳನ್ನು ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.